Venu Sharma
9620959900
Bejai, Bharati Nagar, Mangalore.
7th Cross, Prasarabharati Layout, Hebbala-Dasarahalli, Bangalore.
www.myantaratma.org
venu@myantaratma.org
venu@addidea.co.in

**ಉದ್ದೇಶ:**

ನಮ್ಮ ನಡುವಿನ ನೀತಿ ತಯಾರಕರು, ನೀತಿ ಆಯೋಗ ಎನ್ನುವ ಪ್ರತಿಷ್ಠಿತ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ವರ್ಗದವರು ವಿಭಿನ್ನ ರೀತಿಯಲ್ಲಿ ಯೋಚಿಸಿ ಭಾರತದ ಸಾರ್ವಭೌಮ ಮತ್ತು ಸರ್ವಾಂಗೀಣ ಬೆಳವಣಿಗೆಯ ಕುರಿತಾದ ನೀತಿಗಳನ್ನು ರೂಪಿಸುವತ್ತ ಕಾರ್ಯಪ್ರವೃತ್ತರಾಗಬೇಕಿದೆ. ಕ್ಷಿಪ್ರವಾಗಿ ಬೆಳವಣಿಗೆ ಕಾಣುತ್ತಿರುವ ನಮ್ಮ ದೇಶದ ಸುಂದರ ನಾಳೆಗಳಿಗೆ ಭದ್ರ ಅಡಿಪಾಯ ಇಂದಿನ ಅಗತ್ಯ. ಈಗಾಗಲೇ ಉನ್ನತ ಸ್ಥಿತಿಯಲ್ಲಿರುವ ಬೇರೆ ಸಣ್ಣಪುಟ್ಟ ದೇಶಗಳಿಗೆ ಹೋಲಿಸಿದರೆ ನನ್ನ ಭಾರತ ಸಂಪೂರ್ಣ ಭಿನ್ನ ಮತ್ತು ಕ್ಲಿಷ್ಟ. ವಿಶಿಷ್ಟ ಸಂಸ್ಕೃತಿ, ವಿಭಿನ್ನ ಆಚಾರ-ವಿಚಾರ, ನೂರಾರು ಜಾತಿ-ಮತಗಳು, ತರಹೇವಾರಿ ಧರ್ಮಗಳು, ಹಳ್ಳಿ-ಪಟ್ಟಣ, ಬಡವ-ಬಲ್ಲಿದ-ಶ್ರೀಮಂತ ಮುಂತಾದ ವೈವಿಧ್ಯತೆ ಮತ್ತು ಸಂಕೀರ್ಣತೆಯಿಂದ ಕೂಡಿದ ದೇಶ ನಮ್ಮದು. ಅದಕ್ಕಾಗಿ ನಮ್ಮಗಳ ಸರ್ವಾಂಗೀಣ ಅಭಿವೃದ್ಧಿಗೆ ಸ್ಥಿರ, ತುಕ್ಕು ಹಿಡಿದ ಮತ್ತು ಹಳೆಯ ಓಬೀರಾಯನ ಕಾಲದ ನೀತಿಗಳು ಹೆಚ್ಚು ಉಪಯೋಗವಾಗಲಾರವು.

**ದೇಶ 'ದೊಡ್ಡದು', 'ಶ್ರೇಷ್ಠ' ಎಂಬ ಪರಿಕಲ್ಪನೆ ಹೇಗೆ? ಯಾಕೆ?**

ಗಲ್ಫ್ ರಾಷ್ಟ್ರಗಳಿಗೆ ಪೆಟ್ರೋಲಿಯಂ ಉತ್ಪನ್ನಗಳು ದೊಡ್ಡ ಮಟ್ಟದ ಆದಾಯದ ಮೂಲ ಮತ್ತು ಪ್ರಮುಖ ವಸ್ತು-ವಿಷಯ. ಅದೇ ರೀತಿ ಮಲೇಷ್ಯಾ-ಸಿಂಗಪೂರ್ ನಂಥಾ ದೇಶಗಳು ಪ್ರವಾಸೋದ್ಯಮವನ್ನು (Tourism) ನೆಚ್ಚಿಕೊಂಡಿವೆ ಮತ್ತು ಅದು ಅಲ್ಲಿನ ಆದ್ಯತೆಯೂ (priority) ಹೌದು. ಆಫ್ರಿಕಾದಂಥಾ ಬಡ ದೇಶದಲ್ಲಿ ಇದೆಲ್ಲಕ್ಕಿಂತ ಪ್ರಾಮುಖ್ಯವಾದುದು ಎರಡು ಹೊತ್ತಿನ ಊಟ. ದೇಶ-ಪ್ರದೇಶ ಬದಲಾದಂತೆ ಆದ್ಯತೆಗಳೂ ಬದಲಾಗುತ್ತವೆ. ಈ ಕೆಳಗೆ ನಮೂದಿಸಿದ 9+ ವಿವಿಧ ಅಂಶಗಳು ನಮ್ಮ ದೇಶ ಯಾಕೆ ಭಿನ್ನ, ಹೇಗೆ ದೊಡ್ಡದು ಎನ್ನುವ ವಿಚಾರಗಳನ್ನು ವಿವರವಾಗಿ ವಿಷದಪಡಿಸುತ್ತವೆ.

- **ಕೃಷಿ ಕ್ಷೇತ್ರ**: ಇದು ಭಾರತದ ಆರ್ಥಿಕತೆಯ ಬೆನ್ನೆಲುಬು. ,ಬಿತ್ತನೆ ಬೀಜ, ಗೊಬ್ಬರ, ನೈಸರ್ಗಿಕ ಕೃಷಿ ವಿಧಾನ ಮತ್ತು ಆರೋಗ್ಯ, ಆಹಾರ ಸುರಕ್ಷತಾ ಕಾಯ್ದೆ, ಕೃಷಿ ಉತ್ಪನ್ನಗಳಿಗೆ ಒಳ್ಳೆಯ ಬೆಲೆ-ಬೆಂಬಲಬೆಲೆ, ಮಧ್ಯವರ್ತಿಗಳಿಗೂ ಉತ್ತಮ ಆದಾಯ, ಬೆಳೆ ವಿಮೆ, ತಂತ್ರಜ್ಞಾನ, ನದಿ ಜೋಡಣೆ, ನಾಲೆ ನೀರು ಕೃಷಿಗೆ ಇನ್ನಷ್ಟು ವಿಸ್ತರಣೆ, ಗುಂಪಾಗಿ ದೊಡ್ಡ ಮಟ್ಟದಲ್ಲಿ ಕೃಷಿಗಾರಿಕೆ, ಕೃಷಿಯ ಕಾರ್ಪೊರೇಟೀಕರಣ, ಕೃಷಿ ಸಾಲ ಮತ್ತದರ ಮರುಪಾವತಿ-ಮನ್ನಾ, ಯುವ ಜನಾಂಗ ಮತ್ತು ಕೃಷಿಯೆಡೆಗೆ ಅವರ ನಿರಾಸಕ್ತಿ, ಕೃಷಿ ಉತ್ಪನ್ನಗಳ ದಾಸ್ತಾನು ಮತ್ತು Cold storage unit ಗಳು, ಉತ್ತಮ ಆರೋಗ್ಯಕ್ಕೆ ಒಳ್ಳೆಯ ಕೃಷಿ ಉತ್ಪನ್ನಗಳು, ಅರ್ಹರಿಗೆ ಮಾತ್ರ ಸಬ್ಸಿಡಿ...
- **ಬ್ಯಾಂಕಿಂಗ್ ಮತ್ತು ಫೈನಾನ್ಸ್**: ಬ್ಯಾಂಕುಗಳ ವಿಲೀನ, ಕಾರ್ಪೊರೇಟ್ ಸಂಸ್ಥೆಗಳು, NPA, ರಿಯಲ್ ಎಸ್ಟೇಟ್ ಉದ್ಯಮ ಮತ್ತು ಅದರ ಕರಾಳಮುಖ, ಕಪ್ಪು ಹಣ, ಬೇನಾಮಿ ಆಸ್ತಿ ಮತ್ತು ಸ್ವತ್ತು, ಖೋಟಾ ನೋಟು ಜಾಲ, ಸ್ವಿಸ್ ಖಾತೆಗಳು, ಷೇರು ಮಾರುಕಟ್ಟೆ, ಬಾಂಡುಗಳು, ಉಳಿತಾಯ ಖಾತೆ, ಹಿರಿಯ ನಾಗರಿಕರು, ಕೋ ಆಪರೇಟಿವ್ ಬ್ಯಾಂಕ್ ಗಳ ಪಾತ್ರ, ಗ್ರಾಮೀಣ ಆರ್ಥಿಕ ಸಾಕ್ಷರತೆ ಮತ್ತು ಅಭಿವೃದ್ಧಿ...
- **ಶಿಕ್ಷಣ**: ಯಾವುದೇ ದೇಶದ ಭವಿಷ್ಯ ಮತ್ತು ಸದೃಢತೆ ಅಲ್ಲಿನ ಶಿಕ್ಷಣ ವ್ಯವಸ್ಥೆ ಮತ್ತು ಪದ್ಧತಿಯ ಮೇಲೆ ಅವಲಂಬಿತವಾಗಿದೆ. ಉನ್ನತ ಶಿಕ್ಷಣ ಮತ್ತು ಉದ್ಯೋಗ, ಪ್ರಾಥಮಿಕ ಶಿಕ್ಷಣ ಪದ್ಧತಿ, ಸಮವಸ್ತ್ರ ಶಿಕ್ಷಣ ನೀತಿ, ಸರ್ಕಾರಿ ವಿಶ್ವವಿದ್ಯಾಲಯಗಳು ಮತ್ತು ಖಾಸಗೀ ವಿಶ್ವವಿದ್ಯಾಲಯಗಳು (ಡೀಮ್ಡ್), ಟ್ಯೂಷನ್ ಮಾಫಿಯಾ ಮತ್ತು ಶಾಲಾ ಶಿಕ್ಷಣ, ವೇಗ ಮತ್ತು ಆವಿಷ್ಕಾರ, ಶಿಕ್ಷಣ ಮಂಡಳಿಗಳು, ಮಾರ್ಗದರ್ಶಕ ತಂತ್ರ, ಕಲಿಕೆ ಮತ್ತು ಗುರು,

ಹೊಸಪೀಳಿಗೆಯ ಕಲಿಕಾ ವಿಧಾನ, ಡ್ರಗ್ಸ್, ಕೆಟ್ಟ ಹವ್ಯಾಸಗಳು, ಹರೆಯದ ವ್ಯಾಮೋಹ ಮತ್ತದಕ್ಕೆ ಇಂಬು ನೀಡುವ ಬೆರಳ ತುದಿಗೆ ಸಿಗುವ ತಂತ್ರಜ್ಞಾನ ಮತ್ತು ಅಶ್ಲೀಲತೆ...

- **ಅಟೋಮೊಬೈಲ್**: ರಸ್ತೆಗಳ ಅಗಲೀಕರಣ ಮತ್ತು ವಿಸ್ತಾರ, ಹೆದ್ದಾರಿಗಳ ನಿರ್ವಹಣೆ, ಅಭಿವೃದ್ಧಿ ಮತ್ತು ಹಸಿರು ನ್ಯಾಯಮಂಡಳಿ, ಇಂಧನ ದಕ್ಷತೆ, ಹೈಬ್ರಿಡ್ ತಂತ್ರಜ್ಞಾನದೆಡೆಗಿನ ನೀತಿ, ಹೆಲ್ಮೆಟ್ ಮತ್ತು ಸುರಕ್ಷತಾ ನಿಯಮಗಳು, ರೈಲ್ವೆ ಆಧುನೀಕರಣವೆಂಬ ಹಗಲುಗನಸು, ವಿಮಾನ ನಿಲ್ದಾಣಗಳು ಮತ್ತು ವಿಮಾನಯಾನ ನೀತಿ, ಸಾರ್ವಜನಿಕ ಸಾರಿಗೆ ವ್ಯವಸ್ಥೆ, ಮಾಲಿನ್ಯ ಮತ್ತದರ ಸಮರ್ಪಕ ನಿಯಂತ್ರಣ...
- **ಆರೋಗ್ಯ- ಔಷಧಿ-ಆಸ್ಪತ್ರೆ**: ಸೂಕ್ತ ಔಷಧ ಮತ್ತು ನಿಷೇಧಿತ ಔಷಧಗಳು, ರಾಷ್ಟ್ರೀಯ ಆರೋಗ್ಯ ನೀತಿ, ಆರೋಗ್ಯ ವಿಮೆ, ಉತ್ತಮ ಆರೋಗ್ಯ ಮತ್ತು ಭಾರತೀಯ ತತ್ವಶಾಸ್ತ್ರ, ವಿವಿಧ ವೈದ್ಯಕೀಯ ಚಿಕಿತ್ಸಾ ವಿಧಾನಗಳು - ಆಯುರ್ವೇದ, ಯುನಾನಿ, ಹೋಮಿಯೋಪಥಿ, ಜರ್ಮನ್ ರೆಮಿಡಿ, ಸಿದ್ಧ, ಇಂಗ್ಲಿಷ್ ಇತ್ಯಾದಿ. ಅಂಗದಾನ ಮತ್ತದರ ಬಗೆಗಿನ ನೀತಿ, ಜೀವ ರಕ್ಷಣಾ ವ್ಯವಸ್ಥೆ, ಕ್ಯಾನ್ಸರ್ ಮತ್ತಿತರ ಮಾರಣಾಂತಿಕ ರೋಗಗಳ ದುಬಾರಿ ಚಿಕಿತ್ಸಾ ವೆಚ್ಚ, ಆರೋಗ್ಯ ನೀತಿ ಸಂಹಿತೆ...
- **ಉತ್ಪಾದನೆ ಮತ್ತು ವ್ಯಾಪಾರ:** ಪೂರೈಕೆ ಸರಣಿ ನಿರ್ವಹಣೆ (Supply Chain Management) ಮತ್ತು ವ್ಯವಸ್ಥೆ, ಸಣ್ಣ ವ್ಯಾಪಾರಸ್ಥರ ಹಿತ ಕಾಪಾಡುವಿಕೆ, ಬಹುರಾಷ್ಟ್ರೀಯ ಸಂಸ್ಥೆಗಳ ದಬ್ಬಾಳಿಕೆ, ಹಣಕಾಸು ನಿರ್ವಹಣೆ, ಕನಿಷ್ಠ ತೆರಿಗೆ ಪದ್ಧತಿ...
- **ಜ್ವಲಂತ ಸಾಮಾಜಿಕ ಸಮಸ್ಯೆಗಳು:** ಜಾತಿ-ಧರ್ಮ-ಮತ ಸಮರ ಮತ್ತು ರಾಜಕೀಯ, ಕೋರ್ಟಿನ ಆದೇಶಗಳು ಮತ್ತವುಗಳ ಅನುಷ್ಠಾನ, ಋಣಾತ್ಮಕ ವಿಷಯಗಳ ವಿಜೃಂಭಣೆ - ಮಾಧ್ಯಮಗಳ ಪಾತ್ರ, ಜಾಹೀರಾತು ನೀತಿ, ಸೋಶಿಯಲ್ ಮೀಡಿಯಾ, ಮೀಸಲಾತಿ ಮತ್ತದರ ಅವೈಜ್ಞಾನಿಕ ಮಾನದಂಡ, ಇಂದಿನ ಯುವಪೀಳಿಗೆ ಮತ್ತು ಭಾರತೀಯ ಸಂಸ್ಕೃತಿ-ಮೌಲ್ಯ, ಲಿಂಗ ಸಮಾನತೆ, ಮದುವೆಗಳು, ಸೋಶಿಯಲ್ ಪೊಲೀಸಿಂಗ್, ಜಾತಿ ಪದ್ಧತಿ ಮತ್ತು ಚಳುವಳಿಗಳು...
- **ವ್ಯವಸ್ಥೆ-ಪ್ರಕ್ರಿಯೆ, ಉತ್ತಮ ಆಡಳಿತ ಮತ್ತು ಪಾರದರ್ಶಕತೆ:** ಜನಸಾಮಾನ್ಯ ತನ್ನ ಜೀವನೋಪಾಯಕ್ಕೆ ಹೆಚ್ಚಿನದನ್ನು ಬಯಸುವವನಲ್ಲ. ಲಭ್ಯವಿರುವ ಅತೀ ಕಡಿಮೆ ಮೂಲದಿಂದ ಜೀವನ ನಿರ್ವಹಿಸುವ ಸಾಮರ್ಥ್ಯ ಉಳ್ಳವನು. ಅಂಥಾ ಜನಸಾಮಾನ್ಯರ ಮೂಲಭೂತ ಅವಶ್ಯಕತೆಯಾದ 'ರೋಟಿ-ಕಪ್ಡಾ-ಮಕಾನ್' ಪ್ರತಿಯೊಬ್ಬರಿಗೂ ಸುಲಭವಾಗಿ ದೊರಕುವಂತೆ ಮಾಡಲು ಸಾಧ್ಯವೇ? ಇದೆಲ್ಲದರ ಜೊತೆಗೆ ಈಗಿನ ಅಗತ್ಯಗಳಾದ, ಉತ್ತಮ ಮೂಲಸೌಕರ್ಯ, ರಸ್ತೆ, ನೀರು, ವಿದ್ಯುತ್, ಉತ್ತಮ ಗುಣಮಟ್ಟದ ಆಸ್ಪತ್ರೆ ಜನಸಾಮಾನ್ಯನಿಗೆ ಸಿಗುವಂತಾಗಬೇಕು... ಕೂಗಳತೆ ದೂರದಲ್ಲಿ ಒಳ್ಳೆಯ ಶಿಕ್ಷಣ ಸಂಸ್ಥೆಗಳು, ಸರಕಾರೀ ಸೇವೆಗಳ ಮಾಹಿತಿ ಮತ್ತು ಸೌಲಭ್ಯ ಪ್ರತೀ ಭಾರತೀಯನ ಹಕ್ಕು ಮತ್ತು ಅವಶ್ಯಕತೆ... 'ಕಾಮನ್ ಮ್ಯಾನ್'ನ ಪಾಲಿಗೆ ಇವಿಷ್ಟು ಇನ್ನೂ ಮರೀಚಿಕೆಯಾಗಿಯೇ ಉಳಿದಿರುವುದು ದುರಂತ ಮತ್ತು ವಿಪರ್ಯಾಸ... ನಮ್ಮ ನೇತಾರರು ಮತ್ತು ಸರಕಾರಗಳು ಯುರೋಪಿಯನ್ ರಾಷ್ಟ್ರಗಳ 'ಅಭಿವೃದ್ಧಿ ಮಾದರಿ'ಯನ್ನು ಅನುಸರಿಸಬೇಕಾಗಿದೆ..
- **ಅಂತಾರಾಷ್ಟ್ರೀಯ ಸಂಬಂಧಗಳು ಮತ್ತು ದೇಶಭಕ್ತಿ/ರಾಷ್ಟ್ರಪ್ರೇಮ:** ಈಗಿನ ಕೇಂದ್ರ ಸರಕಾರ ಈ ನಿಟ್ಟನಲ್ಲಿ ಶ್ಲಾಘನೀಯ ನೀತಿ ಹೊಂದಿದ್ದು ಉತ್ತಮ ಕೆಲಸ-ಕಾರ್ಯ ಮಾಡುತ್ತಿದೆ... ಅಭಿವೃದ್ಧಿಯ ಕಾರ್ಯತಂತ್ರ ಗೆಲುವಿನ ಮೆಟ್ಟಿಲಾಗುವುದರಲ್ಲಿ, ಭಾರತ ವಿಶ್ವಗುರು ಆಗುವುದರಲ್ಲಿ ಸಂಶಯವಿಲ್ಲ...

**ದೇಶದ ವಿದ್ಯಾವಂತ-ಪ್ರಬುದ್ಧ ಒಂದು ಕೋಟಿ ಜನರಲ್ಲಿ ನನ್ನ ಕೆಲವು ಪ್ರಶ್ನೆಗಳು ಮತ್ತು ಕಳವಳಗಳು:**

ಮೋದೀಜಿಯವರ ಸಮರ್ಥ ನಾಯಕತ್ವದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈಗಿನ ಕೇಂದ್ರ ಸರಕಾರ ಮತ್ತದರ ಅಂಗ ಸಂಸ್ಥೆಗಳಿಗೆ ನನ್ನ ಕೆಲವು ಪ್ರಶ್ನೆಗಳು. ನಿಜವಾಗಿಯೂ ನಾವೆಲ್ಲಿ ಇದ್ದೇವೆ? ಎನ್ನುವುದನ್ನು ತಿಳಿಯಲು ಮತ್ತು ಸ್ವತಃ ಆತ್ಮಾವಲೋಕನ ಮಾಡಿಕೊಳ್ಳಲು; ನನ್ನ ಪ್ರಶ್ನೆಗಳು, ಗೊಂದಲಗಳು, ಕಳವಳಗಳು, ಅಂತರಾತ್ಮದ ಸಂದೇಹಗಳು:

* ನಮ್ಮನಡುವಿನ ಹಲವಾರು ಸಮಸ್ಯೆ, ಅಭಿವೃದ್ಧಿಯ ಬಗ್ಗೆ ನಿಮಗೆ ಸ್ಪಷ್ಟತೆ ಇದೆಯೇ? ಅಂಥಹಾ ವಿಷಯಗಳ ಆದ್ಯತಾ ಪಟ್ಟಿ (priority structure) ಸಿದ್ಧವಿದೆಯೇ?

* ಶ್ರೇಷ್ಠ ಅಡಿಪಾಯದೊಂದಿಗೆ ಈಗಿನ ನೂತನ 'ನೀತಿ ತಯಾರಿಕಾ ಪ್ರಕ್ರಿಯೆ' ರೂಪುಗೊಂಡಿದೆಯೇ?

* ದೇಶದ ನಾಲ್ಕನೇ ಅಂಗವಾದ ಮಾಧ್ಯಮ ಆ ನಿಟ್ಟಿನಲ್ಲಿ ರಚನಾತ್ಮಕವಾಗಿ ಕಾರ್ಯನಿರ್ವಹಿಸಲು ಯಾಕೆ ಪ್ರಯತ್ನಿಸಬಾರದು?!

* ಭಾರತದ ಬಗೆಗಿನ ನಿಮ್ಮ ದೃಷ್ಟಿಕೋನ ಏನಿದೆ? ನಿಮ್ಮ ದೃಷ್ಟಿಯಲ್ಲಿ ದೇಶದ ಅಭಿವೃದ್ಧಿಯ ಬಗೆಗಿನ ಪರಿಕಲ್ಪನೆ ಏನು?

* ಚಿಂತಕರು ಈ ನಿಟ್ಟಿನಲ್ಲಿ ತಮ್ಮ ಚಿಂತನಾ ಸಾಮರ್ಥ್ಯವನ್ನು ಒರೆಗೆ ಹಚ್ಚುತ್ತಿದ್ದಾರೆಯೇ?

* ದೇಶದ ನೀತಿ ಆಯೋಗ/ನೀತಿ ತಯಾರಕರು ಮೇಲೆ ಹೇಳಿದ 9+ ವಿಚಾರಗಳ ಬಗ್ಗೆ ಒಟ್ಟಾರೆ ಯೋಜನೆ ರಚಿಸುವತ್ತ ಒಲವು ತೋರಿದ್ದಾರೆಯೇ?

* ಒಂದು ದೇಶವಾಗಿ ನಾವು ಯಾವ ನಿರ್ದಿಷ್ಟ ದಿಕ್ಕಿನತ್ತ ಸಾಗುತ್ತಿದ್ದೇವೆ? ನಿಖರ ಮಾರ್ಗಸೂಚಿ ಇದೆಯೇ? ಅಲ್ಲಾ ಅದನ್ನು 'ಸಮಯ' ನಿರ್ಧರಿಸಲಿದೆಯೇ?

* ಮುಂದಿನ ಪಂಚವಾರ್ಷಿಕ ಯೋಜನೆಗಳು ಈ ನಿಟ್ಟಿನಲ್ಲಿ ಯಾವ ಧನಾತ್ಮಕ ಅಂಶಗಳನ್ನು ಹೊಂದಿವೆ? ಈ ವಿಚಾರದಲ್ಲಿ ನೀತಿ ಆಯೋಗದ ಮುಂದಿನ ಯೋಚನೆ-ಯೋಜನೆಗಳೇನು?

* ಉದ್ಯಮಿಗಳು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಆಗಬೇಕಾದ ಅಭಿವೃದ್ಧಿಯ ರೂಪುರೇಷೆ ತಯಾರಿಸಿ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವರೇ?

* NGOಗಳು ಸಾರ್ವಜನಿಕ-ಸಾಮಾಜಿಕ ವಲಯದ ಉನ್ನತಿಯ ಬಗ್ಗೆ ಯೋಚಿಸಲು ಆರಂಭಿಸಿಯಾರೇ?

* 'ಮೇಕ್ ಇನ್ ಇಂಡಿಯಾ'ದ ಸಾಧಕ-ಬಾಧಕಗಳೇನು? ಅದನ್ನು ಯಶಗೊಳಿಸುವುದು ಹೇಗೆ? Start-up ಕಂಪನಿಗಳಿಗೆ ಭೂಮಿ ಮತ್ತು ಬಂಡವಾಳ ನೀಡುವ ಸರಳ ನೀತಿ-ಮಾರ್ಗೋಪಾಯ ತಯಾರಿದೆಯೇ?

* ಮಹಾನ್ ಭಾರತದ ಪರಿಕಲ್ಪನೆ ಸಾಕಾರಗೊಳಿಸಲು CII, ಇಂಡಸ್ಟ್ರಿ ಅಸೋಸಿಯೇಷನ್, NASSCOM ವಿಚಾರ ವಿನಿಮಯ ಹಂಚಿ ವಿಶದವಾಗಿ ಚರ್ಚಿಸಿ ಪರಿಹಾರ-ಸಲಹೆ ಕೊಡಬಾರದೇಕೆ?

* ನೂರಾರು ವರ್ಷಗಳ ಕೋರ್ಟು ಕೇಸುಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಬಲ್ಲ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನಗಳು ನಡೆಯುತ್ತಿದೆಯೇ?

* ನಷ್ಟದಲ್ಲಿ ಓಡುತ್ತಿರುವ ಸರಕಾರಿ ಸ್ವಾಮ್ಯದ ಸಂಸ್ಥೆಗಳ ಪುನರುತ್ಥಾನ ಸಾಧ್ಯವೇ? ಬಿಳಿ ಆನೆಯಂತಾಗಿರುವ ಹಲವಾರು ಸರಕಾರಿ ಸಂಸ್ಥೆಗಳನ್ನು ಮತ್ತವುಗಳಲ್ಲಿ ಗೂಟಹಾಕಿ ಕೂತಿರುವ ಸರಕಾರಿ ನೌಕರರನ್ನು ರಿಪೇರಿ ಮಾಡುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿದೆಯೇ?

* ಜನರ ತೆರಿಗೆ ಹಣ ಪೋಲಾಗುವುದನ್ನು ಹೇಗೆ ತಡೆಯಬಹುದು?

**ಈ ನಿಟ್ಟಿನಲ್ಲಿ ವೇಣು ಶರ್ಮಾ ಅವರ ಚಿಂತನಾ ಲಹರಿ ಇಲ್ಲಿದೆ:**

ನಾನೊಬ್ಬ ಸ್ನಾತಕೋತ್ತರ ಪದವಿ ಪಡೆದಿರುವ, ಬ್ರಾಂಡ್ ಮ್ಯಾನೇಜ್ಮೆಂಟ್ ಬಗ್ಗೆ ಉದ್ಯಮಿಗಳಿಗೆ ಸಲಹೆಗಾರನಾಗಿ ಕೆಲಸ ನಿರ್ವಹಿಸುತ್ತಿರುವ ಪ್ರಜ್ಞಾವಂತ ಭಾರತೀಯ ನಾಗರಿಕ. ವಿಶಿಷ್ಟವಾಗಿ ಯೋಚಿಸುವ, ವಿಭಿನ್ನವಾಗಿ ಆಲೋಚಿಸಿ ಒಳನೋಟ ಕೊಡುವ ವ್ಯಕ್ತಿತ್ವ ನನ್ನದು. ಮಾಧ್ಯಮ ಕ್ಷೇತ್ರದಲ್ಲೂ ಒಂದಷ್ಟು ಕೆಲಸ ಮಾಡಿದ ಅನುಭವವಿದೆ. ಕೇರಳದ ಕಾಸರಗೋಡಿನ ಸಣ್ಣ ಹಳ್ಳಿ ನನ್ನ ಹುಟ್ಟೂರು. ನನ್ನ ತಂದೆ ಮಂಗಳೂರಿನ ಪ್ರತಿಷ್ಠಿತ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು. ಕೈತುಂಬಾ ಸಂಬಳ ಬರುವ ಸರಕಾರಿ ಹುದ್ದೆಯಾದ ರೆವೆನ್ಯೂ ಇನ್ಸ್ಪೆಕ್ಟರ್ ಹುದ್ದೆ ತ್ಯಜಿಸಿ ಪ್ರಾಧ್ಯಾಪನ ವೃತ್ತಿ ಆರಿಸಿಕೊಂಡರು. ನಮ್ಮದು ಕೃಷಿಕ ಕೂಡು ಕುಟುಂಬ.

VHP, RSS ಸಿದ್ಧಾಂತಗಳನ್ನು ಅನುಕರಿಸಿಕೊಂಡು ಬಂದಿರುವ ಕುಟುಂಬ ನಮ್ಮದು. ನಮ್ಮ ಉಪ್ಪಂಗಳ ಪರಿವಾರ ಮೂಲತಃ ಕೇರಳದ ಕಾಸರಗೋಡಿನ ಕುಂಬಡಾಜೆ ಗ್ರಾಮದಲ್ಲಿದೆ. 1975-77ರ ತುರ್ತು ಪರಿಸ್ಥಿತಿಯಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ಜೈಲು ವಾಸ ಅನುಭವಿಸಿರುವರು. VHP, RSS ಸಂಸ್ಥೆಗಳಲ್ಲಿ ನಮ್ಮ ನಿಕಟ ಬಂಧುಗಳು, ಬಾಂಧವರು ಹಲವಾರು ಜನ ಇದ್ದಾರೆ - ಅವರೊಡನೆ ನನಗೆ ಉತ್ತಮ ಸ್ನೇಹಾಚಾರ-ಬಾಂಧವ್ಯ ಇದೆ. ಚುನಾವಣಾ ಸಂದರ್ಭಗಳಲ್ಲಿ ಕೆಲವು ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡಿ ಅವರಿಗೆ ಪೊಲಿಟಿಕಲ್ ಕನ್ಸಲ್ಟೆಂಟ್ ಆಗಿ ದುಡಿದ ಅನುಭವವೂ ಇದೆ.

**ಓರ್ವ ಸುಶಿಕ್ಷಿತ ಜನಸಾಮಾನ್ಯನಾಗಿ, ಭಾರತದ ಜವಾಬ್ದಾರಿಯುತ ನಾಗರಿಕನಾಗಿ ನನ್ನಲ್ಲಿರುವ ತುಮುಲಗಳು ಹಲವಾರು... ಉತ್ತರ ಸಿಗದ ಪ್ರಶ್ನೆಗಳು ಕೆಲವಾರು:**

- ಕೇವಲ ಹಿಂದೂಯಿಸಂ, ಸ್ವಚ್ಛ್ ಭಾರತ್, ಯೋಗ ಪರಿಕಲ್ಪನೆಗಳಿಂದ ಮಹಾನ್ ಭಾರತವನ್ನು ಕಟ್ಟಲು/ಅಭಿವೃದ್ಧಿಪಡಿಸಲು ಸಾಧ್ಯವೇ?

- ಮಾನ್ಯ ಪ್ರಧಾನ ಮಂತ್ರಿ ಮೋದೀಜಿಯವರು ಮಾತ್ರ ಈಗಿರುವ ಕೊಳಕು ವ್ಯವಸ್ಥೆಯನ್ನು ಸ್ವಚ್ಛಪಡಿಸಿ, ಭಾರತವನ್ನು ಅಭಿವೃದ್ಧಿಪಡಿಸಬಹುದೆಂಬ ಬಲವಾದ ನಂಬಿಕೆ ನನ್ನದು.

- ಈಗಿನ NDA ಸರಕಾರ ಜನಸ್ನೇಹಿ, ಪಾರದರ್ಶಕ ಮತ್ತು ಭ್ರಷ್ಟಾಚಾರ ಮುಕ್ತ ಎನ್ನುವುದು ನಿಜವಾದ ಹೆಮ್ಮೆ.

- ಕೇವಲ ಹಿಂದುತ್ವ ವಿಚಾರಧಾರೆಯಿಂದ ಮಾತ್ರ ದೇಶವನ್ನು ಒಗ್ಗೂಡಿಸಲು, ಬಲಪಡಿಸಲು ಸಾಧ್ಯವಿಲ್ಲ. ಈ 'ಇಸಂ'ಗಳು ಕ್ಲಿಷ್ಟ ಸಾಮಾಜಿಕ ವ್ಯವಸ್ಥೆಯನ್ನು ಇನ್ನೂ ಕ್ಲಿಷ್ಟವಾಗಿಸುವವು.

- 'ಪ್ರತಿಯೊಬ್ಬರಿಗೂ ಪ್ರತೀಸಲವೂ ಪುಕ್ಕಟೆಯಾಗಿ ಮೀನು ಕೊಡುವ' ಸಿದ್ಧಾಂತಕ್ಕೆ ನನ್ನ ವಿರೋಧವಿದೆ. ಬದಲಾಗಿ ಅಂಥವರಿಗೆ ಮೀನು ಹಿಡಿಯುವ ವಿದ್ಯೆ ಕಲಿಸಬೇಕಾಗಿದೆ. ಜಾಗತಿಕ ಕಾರ್ಪೊರೇಟ್ ಸಂಸ್ಥೆಗಳು ಪಾಲಿಸುವ 'ಏನೂ ಪುಕ್ಸಟೆ ಇಲ್ಲ' (no free lunch) ಎನ್ನುವ ಮೂಲಭೂತ ಸಿದ್ಧಾಂತದ ಪರ ಒಲವು ನನ್ನದು.

- ನಮಗೆ ' ಸ್ಮಾರ್ಟ್ ಸಿಟಿ' ಬೇಕೇ ಅಥವಾ 'ಸ್ಮಾರ್ಟ್ ಹಳ್ಳಿ'ಗಳನ್ನು ಕಟ್ಟಬೇಕೇ? - ಆದ್ಯತೆ!

- ಉತ್ತಮ ಚಿಂತಕರು ಖಂಡಿತಾ ಒಳ್ಳೆಯ ಕಾರ್ಯನಿರ್ವಾಹಕರಾಗಲು ಸಾಧ್ಯವಿಲ್ಲ. ಒಳ್ಳೆಯ ಕಾರ್ಯ ನಿರ್ವಾಹಕರು ಉತ್ತಮ ಚಿಂತಕರೂ ಅಲ್ಲ.

- ನಮ್ಮ ಯುವ ಜನಾಂಗಕ್ಕೆ ಮಾದರಿಯಾಗಿ ನಿಲ್ಲುವ ಜವಾಬ್ದಾರಿ ನಮ್ಮೆಲ್ಲರದು. ಅವರಿಗೆ ಒಳಿತು-ಕೆಡುಕು, ಸರಿ-ತಪ್ಪು, ರಾಷ್ಟ್ರೀಯ ಪರಂಪರೆ, ಪುರಾಣಗಳ ಮೌಲ್ಯ ತಿಳಿಹೇಳಬೇಕಿದೆ. ಉತ್ಪಾದಕತೆ ಹೆಚ್ಚಿಸುವ ನಿಟ್ಟಿನಲ್ಲಿ ಜನಾಂಗವನ್ನು ಪಳಗಿಸಬೇಕಿದೆ. TQM, KIZAN ನಂಥಾ ಬೆಸ್ಟ್ ಮ್ಯಾನೇಜ್ಮೆಂಟ್ ಪ್ರಾಕ್ಟೀಸ್ ವಿಷಯಗಳಲ್ಲಿ ಈಗಿನ ತರುಣ ಪರಂಪರೆ ಕುಶಲಗೊಳ್ಳಬೇಕಿದೆ.

- ವೇದ, ಉಪನಿಷತ್, ಭಾರತೀಯ ಪರಂಪರೆ-ಸಂಸ್ಕೃತಿ-ವೈವಿಧ್ಯತೆ ಮುಂತಾದುವುದರ ಬಗ್ಗೆ ಈಗಿನ ಜನಾಂಗಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ. ರಾಷ್ಟ್ರೀಯತೆಯ ವಿಚಾರ ಬಂದಾಗ ನಮಗೆ ಮಾದರಿಯಾಗಬೇಕಾದುದು ಜಪಾನ್ ದೇಶ ಬದಲಾಗಿ ಅಮೆರಿಕಾ ಅಲ್ಲ! ಆರ್ಷ ಧರ್ಮದ ಬಗ್ಗೆ ನನಗೆ ಅತೀವ ನಂಬಿಕೆ ಇದೆ.

- ನಾನು ಸದಾ ಪ್ರಶ್ನೆಗಳನ್ನು ಕೇಳುತ್ತಿರುತ್ತೇನೆ. ನಾನು ನನ್ನೊಳಗೆ- ನನ್ನ ಅಂತರಾತ್ಮವನ್ನು ಪ್ರಶ್ನಿಸುತ್ತೇನೆ. ನನ್ನ ಆಲೋಚನೆಗಳನ್ನು ನಾನು ನಿಗ್ರಹಿಸುವುದಿಲ್ಲ. ಈಗಿನ ಯುವ ಜನಾಂಗ ಮೊಬೈಲ್, ವಾಟ್ಸಪ್ಪ್, ಫೇಸ್ಬುಕ್, ಇಂಟರ್ನೆಟ್ ಇಲ್ಲದೆ ಒಂದು ಕ್ಷಣ ಇರಬಹುದೇ? ಈಗಿನ ಜನಾಂಗ ಪ್ರಶ್ನಿಸುವುದನ್ನು ಮರೆತಂತಿದೆ.

- ಆಧುನಿಕ ಸಂವಹನ ತಂತ್ರಜ್ಞಾನ ಮತ್ತು ತಂತ್ರಗಳ ಮೂಲಕ ನಮ್ಮಲ್ಲಿನ ರಾಜಕೀಯ ಪಕ್ಷಗಳು ಜನರನ್ನು ತಮಗೆ ಬೇಕಾದಂತೆ ನಿಯಂತ್ರಿಸಲು, ಯೋಚಿಸುವಂತೆ ಮಾಡಲು ಪ್ರಯತ್ನಿಸುತ್ತಿವೆ. ಅದೇ ಕ್ಷೇತ್ರದಲ್ಲಿ ಹಲವಾರು ವರುಷಗಳ ಅನುಭವ ನನಗಿರುವುದರಿಂದ ಈ ಮಾತು ಹೇಳುತ್ತಿದ್ದೇನೆ.

ಕೊನೆಯದಾಗಿ ಜನಸಾಮಾನ್ಯ ಈ ತರಹದ ಗಿಮಿಕ್ ಗಳಿಂದಾಗಿ ತನ್ನತನವನ್ನು ಕಳಕೊಂಡು ಬೆತ್ತಲಾಗುತ್ತಿದ್ದಾನೆ. ರಾಜಕಾರಿಣಿಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ವಿಪರ್ಯಾಸ!!

- ಹೀಗೆಲ್ಲ ಹೇಳುವಾಗ ನಾನೂ ಒಂದು ದಿನ ರಾಜಕಾರಿಣಿಯಾಗಿ ನಿಮ್ಮಮುಂದೆ ಬಂದು ಪರಿಸ್ಥಿತಿ ಸುಧಾರಿಸುವ ಭರವಸೆ ಕೊಡುತ್ತೇನೆಂದು, ಹತ್ತರೊಳಗೆ ಹನ್ನೊಂದನೆಯವನಾಗುವೆನೆಂದು ನೀವು ಊಹಿಸಿದರೆ ನಿಮ್ಮ ಊಹೆ ಖಂಡಿತಾ ತಪ್ಪು. ನಾನು ನಾನಾಗಿ, ಜೊತೆಗೆ ಈ ವಿಭಾಗಕ್ಕೆ ಸಲಹೆಗಾರ-ಚಿಂತಕನಾಗಿ ಸೇವೆ ಸಲ್ಲಿಸುವ ಇರಾದೆ ನನ್ನದು. ಇದು ನನ್ನ ಪತ್ನಿ ಮತ್ತು ತಂದೆಯವರಿಗೆ ನಾನು ನೀಡಿದ ಭರವಸೆ-ವಾಗ್ದಾನ. ರಾಜಕೀಯೇತರ ವ್ಯಕ್ತಿಯಾಗಿ, ಶಕ್ತಿಯಾಗಿ, ದೇಶದ ಸಂವಿಧಾನದ ಚೌಕಟ್ಟಿನೊಳಗೇ ಸಮಾಜದ ಉನ್ನತ ಪರಿಕಲ್ಪನೆ ಜನರಿಗೆ ಕಟ್ಟಿಕೊಡುವ ಕನಸು ನನ್ನದು ಅಷ್ಟೇ!

**ಏನಿದು Myantaraatma? ಈಗ ಯಾಕೆ?**

ಕಳೆದ ಮೂರ್ನಾಲ್ಕು ವರುಷಗಳಿಂದ ನನ್ನೊಳಗೆ ಹಲವಾರು ಗೊಂದಲ, ಪ್ರಶ್ನೆಗಳು ಇದ್ದು ಅವುಗಳಿಗೆ ಸಮರ್ಪಕ ಉತ್ತರ ಹುಡುಕುವ ಪ್ರಯತ್ನದಲ್ಲಿದ್ದೇನೆ, ಮಾತನಾಡಲು ಸೂಕ್ತ ಸಮಯ ಮತ್ತು ಸಮರ್ಥ ವ್ಯಕ್ತಿಯ ಹುಡುಕಾಟದಲ್ಲಿದ್ದೇನೆ. ಕೆಲವೇ ತಿಂಗಳುಗಳಲ್ಲಿ ಲೋಕಸಭಾ ಚುನಾವಣೆ ನಮ್ಮೆದುರಿಗಿದೆ ಮತ್ತು ಪ್ರತೀಬಾರಿ ಸರಿಯಾಗಿ ಚುನಾವಣಾ ಸಮಯದಲ್ಲೇ ಯಾಕೆ 'ಅಯೋಧ್ಯೆ, ರಾಮ ಮಂದಿರ ವಿಚಾರ' ಮುನ್ನೆಲೆಗೆ ಬರುತ್ತಿದೆ? ಎನ್ನುವುದನ್ನು ನಾವೆಲ್ಲಾ ಚಿಂತಿಸಬೇಕಾಗಿದೆ. ಇನ್ನೊಂದು ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಕೂಡ ಈ ಲೋಕಸಭಾ ಚುನಾವಣೆಗೆ ಸಜ್ಜಾಗುತ್ತಿದೆ, ಕಳೆದ ಬಾರಿಯಂತೆ ಈ ಬಾರಿಯೂ ಅವರ ಬಳಿ ಬಲವಾದ ಕಾರ್ಯಸೂಚಿ ಇನ್ನೂ ಕಾಣುತ್ತಿಲ್ಲ. ಮಾಧ್ಯಮ, ಟಿವಿ ಚರ್ಚೆಗಳು ಕೇವಲ TRP ಪಡೆಯಲು ಮಾತ್ರ ಸೀಮಿತವಾಗಿದ್ದು, ಗಂಭೀರವಾದದ್ದು ಯಾವುದೂ ಚರ್ಚೆ ಆಗುತ್ತಿಲ್ಲ. ಈಗಿನ ಸಿನೆಮಾಗಳೂ ಕೂಡ ಯಾವುದೇ ಮನರಂಜನೆಯನ್ನು ನೀಡುತ್ತಿಲ್ಲ... ಭಾರತಕ್ಕೆ ಭಾರತವೇ ಚಿಂತಿಸಿ-ಚರ್ಚಿಸಬೇಕಾದ ವಿಷಯಗಳೇ ಇಲ್ಲದಿರುವುದು ದುರಂತ!!

ನಾನಿಲ್ಲಿ ಉಲ್ಲೇಖಿಸಿದ ಕೆಲವೇ ಕೆಲವು ಯೋಚನೆಗಳು, ಪ್ರಶ್ನೆಗಳು ಹೊಸತೊಂದು ದಾರಿಗೆ, ಹೊಸತೊಂದು ಅವಕಾಶಕ್ಕೆ ನಾಂದಿ ಹಾಡಿಯಾವೆಂಬ ಸದಾಶಯ ನನ್ನದು.

ಇಂಥಾ ಗಂಭೀರ ವಿಷಯಗಳ ಮೇಲೆ ರಾಷ್ಟ್ರವ್ಯಾಪಿ ಚರ್ಚೆ ನಡೆಸಿರೆಂದು ಮಾಧ್ಯಮ ಮಿತ್ರರಲ್ಲಿ ನನ್ನ ವಿನಮ್ರ ವಿನಂತಿ.

ಕನಿಷ್ಠ ಪಕ್ಷ ಈಗಿನ ಆಡಳಿತ ಪಕ್ಷವಾಗಿರುವ ಬಿಜೆಪಿ “Product First, Packaging Next” ಎನ್ನುವ ಸಿದ್ಧಾಂತವನ್ನು ಅನುಸರಿಸಿ ಕಾರ್ಯನಿರ್ವಹಿಸಬೇಕು.

ಮಹಾನ್ ಭಾರತದ ಪರಿಕಲ್ಪನೆಗಾಗಿ ಪ್ರಧಾನಿ ಮೋದೀಜಿ, ಆಡಳಿತ ನಡೆಸುತ್ತಿರುವ ಬಿಜೆಪಿ + ಮೈತ್ರಿ ಪಕ್ಷಗಳು, ನೀತಿ ಆಯೋಗ, ನೀತಿ ತಯಾರಕರು, ಮತ್ತಿತರ ಚಿಂತಕರು ಈ ದೃಷ್ಟಿಕೋನದಿಂದ ಯೋಚಿಸಬೇಕೆಂದು ನನ್ನ ವಿನಂತಿ.

ಇದೆಲ್ಲದರ ಹೊರತಾಗಿ ನಾನು ಅಪೇಕ್ಷಿಸುವುದು ಏನೂ ಇಲ್ಲ. ನಾನು ನನ್ನ ಸಣ್ಣ ಪಟ್ಟಣ ಮಂಗಳೂರಿನಲ್ಲಿ, ಹುಟ್ಟೂರು ಕಾಸರಗೋಡಿನಲ್ಲಿ ಆರಾಮವಾಗಿದ್ದೇನೆ.

ಇಲ್ಲಿಗೆ ನನ್ನ ಚಿಂತನಾ ಲಹರಿಗಳ ಬಗೆಗಿನ ವಿವರಣೆಗಳಿಗೆ ಅಲ್ಪವಿರಾಮ ಹಾಕುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಇನ್ನೂ ಉತ್ತಮ ಮತ್ತು ದೇಶದ ಒಳಿತಿನ ಚಿಂತನೆಗಳೊಂದಿಗೆ ನಿಮ್ಮೆದುರು ಹಾಜರಾಗುವೆ. ಹೆಚ್ಚಿನ ವಿವರ-ಮಾಹಿತಿಗಾಗಿ ನೀವು ನನ್ನನ್ನು ಸಂಪರ್ಕಿಸಬಹುದು - ನನ್ನ ಮೊಬೈಲ್ ಸಂಖ್ಯೆ – 9620959900